ಮುತ್ತುಸ್ವಾಮಿ ದೀಕ್ಷಿತರು ಮತ್ತು ಅಧ್ಯಾತ್ಮ

ವಿದ್ವಾನ್ ವಿ. ನಂಜುಂಡಸ್ವಾಮಿ

ಶ್ರೇಷ್ಠ ಸಂಗೀತಗಾರರೂ, ಶಾಸ್ತ್ರಜ್ಞರೂ, ವೇದಾಂತಿಗಳೂ, ಯೋಗಿಗಳೂ, ಅಸಾಧಾರಣ ಕವಿಗಳೂ ಆಗಿದ್ದವರು ದೀಕ್ಷಿತರು. ಅವರ ಜೀವನ, ಸಂಗೀತ ಹಾಗೂ ಸಾಧನೆ ಇವುಗಳ ಬಗ್ಗೆ ಬರೆದಿರುವ ಲೇಖಕರು ಪ್ರಸಿದ್ಧ ಸಂಗೀತ ಶಾಸ್ತ್ರಜ್ಞರು ಹಾಗೂ ವೀಣಾವಾದಕರು. ಸಂಗೀತ, ಶ್ರೀವಿದ್ಯೆ ಮೊದಲಾದ ವಿಷಯಗಳಲ್ಲಿ ಅನೇಕ ಗ್ರಂಥಗಳನ್ನು ಬರೆದಿರುವ ಅವರು ಹಲವು ಮಂದಿ ಸಂಗೀತ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬ್ಯಾಂಕ್ ಉದ್ಯೋಗದಲ್ಲಿದ್ದು ಸ್ವಯಂ ನಿವೃತ್ತಿ ಪಡೆದಿರುವ ಅವರು ಪ್ರಸ್ತುತ ಪೂರ್ಣಾವಧಿ ಸಂಗೀತ, ಸಾಹಿತ್ಯ, ವೇದಾಂತ ಪ್ರಚಾರದಲ್ಲಿ ಸಕ್ರಿಯರಾಗಿ ತೊಡಗಿಕೊಂಡಿದ್ದಾರೆ.

ಕರ್ನಾಟಕ ಸಂಗೀತ ತ್ರಿಮೂರ್ತಿಗಳೆಂದು ಆರಾಧ್ಯಪುರುಷರಾದ ಶ್ಯಾಮಾಶಾಸ್ತ್ರಿಗಳು (೧೭೬೨–೧೮೨೭), ತ್ಯಾಗರಾಜರು (೧೭೬೭–೧೮೪೭) ಮತ್ತು ಮುತ್ತುಸ್ವಾಮಿ ದೀಕ್ಷಿತರು (೧೭೭೫–೧೮೩೫) ಸಮಕಾಲೀನರು ಮತ್ತು ಸಮಸ್ಥಳೀಯರು ಎಂಬುದು ಕೇವಲ ಕಾಕತಾಳೀಯವಲ್ಲವೆಂಬುದನ್ನು ಹಿನ್ನೋಟ ಒದಗಿಸುವ ಅನುಕೂಲತೆಯಿಂದ ತೀರ್ಮಾನಿಸಬಹುದು; ಕರ್ನಾಟಕ ಸಂಗೀತ ವಾಹಿನಿ ಆ ವೇಳೆಗೆ ತಂಜಾವೂರು ಜಿಲ್ಲೆಯ ಕಾವೇರಿ ತೀರದ ತಿರುವಾರೂರಿನಲ್ಲಿ ಮಡುಗಟ್ಟಿ, ತನ್ನ ನೂತನ ಅಭಿವ್ಯಕ್ತಿಗೆ ಈ ನಾದಯೋಗಿಗಳನ್ನು ವರಿಸಿತೋ ಎಂಬಂತೆ. ಸಂಗೀತದ ಲಯ ಭಾಗದ ವೈಖರಿಗೆ ಶ್ಯಾಮಾಶಾಸ್ತ್ರಿಗಳ ಕೃತಿಗಳೂ, ಭಾವರಾಗ ಸಮನ್ವಯತೆಗೆ ತ್ಯಾಗರಾಜರ ಕೃತಿಗಳೂ, ರಾಗರೂಪ ವೈಭವಕ್ಕೆ ದೀಕ್ಷಿತರ ಕೃತಿಗಳೂ ಅದ್ವಿತೀಯ ನಿದರ್ಶನಗಳು.

ಸಂಗೀತ ತ್ರಿಮೂರ್ತಿಗಳಲ್ಲಿ ಕಿರಿಯವರಾದ ಮುತ್ತುಸ್ವಾಮಿ ದೀಕ್ಷಿತರು ತಿರುವಾವೂರಿನಲ್ಲಿ ಮನ್ಮಥನಾಮ ಸಂವತ್ಸರ ಫಾಲ್ಗುಣ ಮಾಸ ಕೃತ್ತಿಕಾ ನಕ್ಷತ್ರ ಭಾನುವಾರದಂದು (೨೪–೦೩–೧೭೭೫) ರಾಮಸ್ವಾಮಿ ದೀಕ್ಷಿತರು ಮತ್ತು ಸುಬ್ಬಲಕ್ಷ್ಮಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ನಲವತ್ತನೇ ವಯಸ್ಸಿನ ತನಕವೂ ಸಂತಾನವಿಲ್ಲದ ದೀಕ್ಷಿತ ದಂಪತಿಗಳಿಗೆ ಚಿದಂಬರನಾಥಸ್ವಾಮಿಯೆಂಬ ಸಂನ್ಯಾಸಿ 'ಶ್ರೀವಿದ್ಯಾ' ಮಂತ್ರ ಉಪದೇಶಿಸಿ ವೈದೀಶ್ವರನ್ ಕೋಯಿಲ್ ಎಂಬ ಸ್ಥಳದ ಅಧಿದೇವತೆ ಬಾಲಾಂಬಿಕಾ ದೇವಿಯನ್ನು ಪೂಜಿಸಲು ಆದೇಶವಿತ್ತರು. ರಾಮಸ್ವಾಮಿ ದೀಕ್ಷಿತರಿಗೆ ಕನಸಿನಲ್ಲಿ ದೇವಿಯೇ ಪ್ರತ್ಯಕ್ಷಳಾಗಿ ಮುತ್ತಿನಹಾರ ಕರುಣಿಸಿದಂತೆ ಕಂಡಿತು. ದೀಕ್ಷಿತ ದಂಪತಿಗಳ ವರಪುತ್ರನ ಜನನ ಸುಬ್ರಮಣ್ಯ ಸ್ವಾಮಿಯ ಜನ್ಮತಾರೆಯಾದ ಕೃತ್ತಿಕಾ ನಕ್ಷತ್ರದಲ್ಲಿ ಆದುದರಿಂದ ಈತನಿಗೆ ಮುತ್ತುಸ್ವಾಮಿಯೆಂದು ನಾಮಕರಣ ಮಾಡಿದರು. ಮುಂದೆ ಈ ದಂಪತಿಗಳಿಗೆ ಚಿನ್ನಸ್ವಾಮಿ ಮತ್ತು ಬಾಲುಸ್ವಾಮಿ ಎಂಬ ಇಬ್ಬರು ಗಂಡುಮಕ್ಕಳೂ, ಅರ್ಥವತ್ತಾಗಿ ದೇವಿಯ ಹೆಸರೇ ಕೊಡಲ್ಪಟ್ಟ ಬಾಲಾಂಬಿಕಾ ಎಂಬ ಮಗಳೂ ಹುಟ್ಟಿದರು. ಈ ಎಲ್ಲ ವಿವರಗಳೂ ಮುತ್ತುಸ್ವಾಮಿ ದೀಕ್ಷಿತರ ಕಲ್ಯಾಣಿ ರಾಗದ ಚಿರಪರಿಚಿತ 'ಭಜರೇ ರೇ ಚಿತ್ತ ಬಾಲಾಂಬಿಕಾಮ್' ಕೃತಿಯಲ್ಲಿ ಸೂಚ್ಯವಾಗಿ ಬಂದಿವೆ.

ರಾಮಸ್ವಾಮಿ ದೀಕ್ಷಿತರು ಸ್ವತಃ ವಾಗ್ಗೇಯಕಾರರು ಮತ್ತು ವೈಣಿಕರು. ಇವರ ಮಾತೃಭಾಷೆ ತಮಿಳು. ಆದರೆ ಇವರು ತಮ್ಮ ಮಕ್ಕಳಿಗೆ ಆ ಕಾಲದಲ್ಲಿ ಸಹಜವಾಗಿದ್ದ ಸಂಸ್ಕೃತ ಸಾಹಿತ್ಯ ಶಾಸ್ತ್ರಗಳ ವ್ಯಾಸಂಗ ಮತ್ತು ವೇದಾಧ್ಯಯನ ಏರ್ಪಡಿಸಿದರು. ಜೊತೆಗೆ ಶ್ರೀಪುರಂದರದಾಸರ ಕಾಲದಿಂದ ಕರ್ನಾಟಕ ಸಂಗೀತದಲ್ಲಿ ಅನುಸರಿಸಲಾಗುತ್ತಿದ್ದ ಪ್ರಯೋಗ ವಿಧಾನದಲ್ಲಿ ಶಿಕ್ಷಣವನ್ನೂ ನೀಡಿದರು. ಇತ್ತ ಸಂಗೀತ ಶಾಸ್ತ್ರದಲ್ಲಿ ಪ್ರಾಚೀನ ಹಾಗೂ ಮಧ್ಯಕಾಲೀನ ಗ್ರಂಥಕಾರರು ನಿರೂಪಿಸಿದ್ದಂತೆ ಮಾತ್ರವೇ ಅಲ್ಲದೆ, ಆಧುನಿಕ ಕರ್ನಾಟಕ ಸಂಗೀತವನ್ನು ಪ್ರತಿಪಾದಿಸಿದ ವೆಂಕಟಮಖಿ ಪದ್ಧತಿಯಲ್ಲಿಯೂ ಮಗನಿಗೆ (ಮುತ್ತುಸ್ವಾಮಿ) ತಂದೆ ಪಾಠ ಮಾಡಿದರು. ಹೀಗೆ ಪ್ರಾಚೀನ ಪರಂಪರೆ ಮತ್ತು ಅರ್ವಾಚೀನ ಸಂಪ್ರದಾಯಗಳ ಭವ್ಯ ಉತ್ಪನ್ನವಾಗಿ ಇವರು ವಿಕಸಿಸಿದರು.

ಮುತ್ತುಸ್ವಾಮಿ ದೀಕ್ಷಿತರು ವೀಣಾವಾದನದೊಂದಿಗೆ ಹಾಡುವ ಅಭ್ಯಾಸವನ್ನೂ ಇಟ್ಟುಕೊಂಡಿದ್ದರು. ವೀಣೆ ಗಮಕಪ್ರಧಾನ

ವಾದ್ಯ. ಅದರಲ್ಲೂ ವಿಳಂಬಕಾಲಕ್ಕೆ ಹೇಳಿ ಮಾಡಿಸಿದ್ದು. ಎಂದೇ ದೀಕ್ಷಿತರಿಗೆ ವಿಳಂಬ ನಡೆಯಲ್ಲೂ ಗಮಕ ಪ್ರಯೋಗಗಳಲ್ಲಿಯೂ ಸಹಜ ಆಸಕ್ತಿ ಮತ್ತು ಪ್ರಭುತ್ವ. ಈ ಗಮಕ ವಿಶೇಷ ಅವರ ಕೃತಿಗಳ ಲಾವಣ್ಯ ನಿಧಿಯಾಗಿ ಅವುಗಳಿಗೆ ವಿಶೇಷ ಸೌಂದರ್ಯ ನೀಡಿದೆ. ಅವರ ಎಲ್ಲ ಕೃತಿಗಳೂ ವಿಳಂಬ ಕಾಲದಲ್ಲಿದ್ದು ಕೊನೆಯ ಚರಣ ಗಳಲ್ಲಿ ಮಾತ್ರ ಕೆಲವು ಮಧ್ಯಮ ಕಾಲದ ಸಂಚಾರದಿಂದ ಕೂಡಿವೆ. ವಿಳಂಬ ಕಾಲದಲ್ಲಿ ರಾಗದ ಸ್ವರೂಪ ವೈಭವ, ಸೌಂದರ್ಯ ಮತ್ತು ಸೂಕ್ಷ್ಮ ಛಾಯೆ ಬಿಟ್ಟು ಹೋಗದ ಹಾಗೆ ರಾಗಭಾವ ತುಂಬಿ ತುಳುಕುವುದು. ಇವರ ಕೃತಿಗಳಲ್ಲಿ ಗಮಕಗಳು ಘನಿಸಿರು ವಂತೆ ಮಿಕ್ಕ ಯಾವ ವಾಗ್ಗೇಯಕಾರರರ ರಚನೆಗಳಲ್ಲಿಯೂ ಘನೀಕರಿಸಿರುವುದಿಲ್ಲವೆಂಬುದು ನಿರ್ವಿವಾದ.

ತಂದೆಯ ಗುರುಗಳಾದ ಚಿದಂಬರನಾಥಯೋಗಿಗಳೇ ಮಗ ನಿಗೂ ಶ್ರೀವಿದ್ಯಾ ಉಪಾಸನಾ ದೀಕ್ಷೆ ಕೊಟ್ಟು ತಂತ್ರ ವಿಧಿ ಪೂಜೆ ಯನ್ನೂ ಶಂಕರಾಚಾರ್ಯ ಪ್ರತಿಪಾದಿತ ರೀತಿಯಲ್ಲಿ ವೇದಾಂತ ವನ್ನೂ ಉಪದೇಶಿಸಿದರು. ದೀಕ್ಷಿತರು(ಮಗ) ತಮ್ಮ ಈ ಹಿರಿ ಗುರುಗಳ ಜೊತೆ ಕಾಶಿಯಲ್ಲಿ ಐದಾರು ವರ್ಷ ವೇದಾಂತಶಾಸ್ತ್ರ ಮತ್ತು ಸಂಗೀತಶಾಸ್ತ್ರ ಅಧ್ಯಯನ ಮಾಡಿದರು. ಈ ಅವಧಿಯಲ್ಲಿ ಗುರುಗಳ ಆದೇಶದಂತೆ ಒಮ್ಮೆ ಗಂಗೆಯಲ್ಲಿ ಮೂರು ನಾಲ್ಕು ಸೋಪಾನ ಇಳಿದಾಗ ದೇವನಾಗರೀ ಲಿಪಿಯಲ್ಲಿ 'ರಾಮ' ಎಂದು ಕೆತ್ತಿದ್ದ ವೀಣೆ ದೊರೆಯಿತು! ಅದನ್ನು ಗುರುಗಳಿಗೆ ಅರ್ಪಿಸಿದಾಗ ''ಇದು ಗಂಗಾದೇವಿ ನಿನಗೆ ಕರುಣಿಸಿರುವ ಪ್ರಸಾದ'' ಎಂದು ಪುನಃ ಅವರಿಗೆ ಅದನ್ನು ಆಶೀರ್ವಾದ ಮಾಡಿ ನೀಡಿ, ತಾವು ಗಂಗೆಯಲ್ಲಿ ಮುಳುಗಿ ನಿರ್ಯಾಣ ಹೊಂದಿದರು. ಈ ವೀಣೆ ಈಗಲೂ ಅವರ ಪರಂಪರೆಯ ಅಂಬಿ ದೀಕ್ಷಿತರ ಮಗ ಬಾಲು ಸ್ವಾಮಿಯವರ ಬಳಿಯಲ್ಲಿದೆ.

ಅಂದಿನ ದಿನಗಳಲ್ಲಿ ಈಸ್ಟ್ ಇಂಡಿಯಾ ಕಂಪನಿ ಮದ್ರಾಸಿನ ಫೋರ್ಟ್ ಸೆಂಟ್ ಜಾರ್ಜ್‌ನಲ್ಲಿ ನುಡಿಸುತ್ತಿದ್ದ ವಾದ್ಯಮೇಳದ ಪ್ರಭಾವ ದೀಕ್ಷಿತರ ಕುಟುಂಬದವರ ಮೇಲೆ ಬಿದ್ದಿತು. ಪಿಟೀಲನ್ನು ಸಂಗೀತ ಕಛೇರಿಯಲ್ಲಿ ನಿರಂತರ ವಾದ್ಯವಾಗಿ ಬಳಸಿಕೊಳ್ಳುವುದು ಇದರ ತತ್‌ಕ್ಷಣದ ಲಾಭ. ದೀಕ್ಷಿತರ ಶಿಷ್ಯ ಪರಂಪರೆಗೆ ಸೇರಿ ದವರೇ ಮುಂದೆ ಕರ್ನಾಟಕ ಸಂಗೀತದಲ್ಲಿ ಪಿಟೀಲು ವಾದ್ಯವನ್ನು ಮೇಲಕ್ಕೇರಿಸಲು ಕಾರಣರಾದರೆಂಬುದನ್ನು ಇಲ್ಲಿ ನೆನೆಯ ಬಹುದು. ಪಿಟೀಲಿಗೆ ಹಿಂದೂಸ್ತಾನಿ ಸಂಗೀತದಲ್ಲಿ ಇದೇ ಅಂತಸ್ತು ಇಲ್ಲ ಎನ್ನುವುದು ಗೊತ್ತಿರುವ ಸಂಗತಿ.

ದೀಕ್ಷಿತರ ಕೃತಿಗಳನ್ನು ಪರಿಶೀಲಿಸಿದಾಗ ಅವು ಹಿಂದುಸ್ತಾನಿ ಸಂಗೀತದ ಪ್ರಭಾವಕ್ಕೊಳಗಾಗಿರುವುದು ತಿಳಿಯುತ್ತದೆ. ಕಾಶೀ ಕ್ಷೇತ್ರದಲ್ಲಿದ್ದಾಗ ಆ ಪದ್ಧತಿಯಲ್ಲಿ ಅಪಾರ ಪರಿಶ್ರಮ ಪಡೆದು ಹಿಂದೂಸ್ತಾನಿ ರಾಗಗಳನ್ನು ಮನನ ಮಾಡಿಕೊಂಡರು: ಯಮನ್ ಕಲ್ಯಾಣಿ ರಾಗದ 'ಜಂಬೂಪತೇ ಮಾಂ ಪಾಹಿ', ಹಮೀರ್ ಕಲ್ಯಾಣಿರಾಗದ 'ಪರಿಮಳ ರಂಗನಾಥಂ', ದ್ವಿಜಾವಂತಿ ರಾಗದ 'ಚೇತಶ್ರೀ ಬಾಲಕೃಷ್ಣಂ' ಮತ್ತು ಹಿಂದೂಸ್ಥಾನಿಯ ಬಸಂತ್ ರಾಗವನ್ನು ಹೋಲುವ ಮಾಳವ ಪಂಚಮ ರಾಗದ 'ವಾಸುದೇವ ಮುಪಾಸ್ಮಹೇ' ಮುಂತಾದ ಕೃತಿಗಳು ಕೆಲವು ಉದಾಹರಣೆಗಳು.

ದೀಕ್ಷಿತರವ್ಯಕ್ತಿತ್ವದಲ್ಲಿಭಕ್ತಿ ಅಂತರಗಂಗೆಯಂತೆ ಅಂತಃಪ್ರವಾಹಿ. ಇದನ್ನು ಅವರ ಕೃತಿಗಳಲ್ಲಿ ಗಮನಿಸಬಹುದು. ಅವರು ಅಚ್ಚ ಸಂಸ್ಕೃತದಲ್ಲಿ ಸುಮಾರು ನಾನೂರು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿರಾಗಸ್ವಚ್ಛವಾಗಿ, ಖಚಿತವಾಗಿ ಮತ್ತು ಸಂಪೂರ್ಣವಾಗಿ ಎರಕಗೊಂಡಿದೆ. ರಾಗ ಸಂಚಾರಗಳು ಮಂದ್ರ, ಮಧ್ಯ ಮತ್ತು ತಾರಸ್ಥಾಯಿಗಳಲ್ಲಿ ವ್ಯಾಪಿಸಿ ಅಪೂರ್ವ ಆನಂದ ನೀಡುತ್ತವೆ. ಸಾಹಿತ್ಯ ಬಿಟ್ಟು ಕೃತಿಯನ್ನು ಆಕಾರದಲ್ಲಿ ವಿಸ್ತರಿಸಿದರೆ ಅದು ರಾಗಾಲಾಪನೆ. ಇದೇ ದೀಕ್ಷಿತರ ಕೃತಿಗಳ ಮುಖ್ಯ ಆಕರ್ಷಣೆ. ಇವರ ರಚನೆಗಳ ಪೈಕಿ ಹೆಚ್ಚಿನವು ತ್ಯಾಗರಾಜರ ರಚನೆಗಳಂತೆ ಸರಳ ವಾದ ಆದಿ ಮತ್ತು ರೂಪಕತಾಳಗಳಲ್ಲಿವೆ. ಶ್ಯಾಮಾಶಾಸ್ತ್ರಿಗಳ ರಚನೆಗಳು ಹೀಗಲ್ಲ: ಇವು ಹೆಚ್ಚಾಗಿ ಮಿಶ್ರಛಾಪು ತಾಳಗಳಲ್ಲಿವೆ. ದೀಕ್ಷಿತರ ಕೃತಿಗಳಲ್ಲಿ ಸಾಹಿತ್ಯದ ಬಿಕ್ಕಟ್ಟು, ಪದ-ಲಯಗಳ ಚಮತ್ಕಾರ, ರಾಗ ಮುದ್ರೆ, 'ಗುರುಗುಹ' ಅಂಕಿತ ಅರ್ಥವತ್ತಾಗಿ ಬರುವುದು. ಜೊತೆಗೆ ಒಂದು ಕ್ರಮ, ನಿಯಮ, ತತ್ತ್ವ ಪ್ರತಿ ಪಾದನೆ ಮುಂತಾದವೂ ವೀಣಾವಾದನಕ್ಕೆ ಹೇಳಿ ಮಾಡಿಸಿದಂಥ ಗಮಕಯುಕ್ತ ಧಾತುಗಳೂ ಸಮೃದ್ಧವಾಗಿವೆ. ತೋಡಿ ಮುಂತಾದ ಪ್ರಸಿದ್ಧ ರಾಗಗಳಲ್ಲದೆ ಪ್ರಾಚೀನರಾಗಗಳಾದ ಮಂಗಳ ಕೈಶಿಕಿ ಯಲ್ಲಿ 'ಶ್ರೀ ಭಾರ್ಗವೀ', ಘಂಟಾರಾಗದಲ್ಲಿ 'ಶ್ರೀ ಕಮಲಾಂಬಿಕೆ ಅವಾವ ಶಿವೇ', ನಾರಾಯಣಗೌಳ ರಾಗದಲ್ಲಿ 'ಶ್ರೀ ರಾಮಂ ರವಿ ಕುಲಾಬ್ಧಿ ಸೋಮಂ' ಕೃತಿಗಳನ್ನು ರಚಿಸಿದ್ದಾರೆ. ಭೈರವಿ ರಾಗದ 'ಬಾಲಗೋಪಾಲ' ಕೃತಿಯಲ್ಲಿ 'ವೈಣಿಕ ಗಾಯಕ ಗುರುಗುಹ ನುತ' ಎಂದು ಅರ್ಥಪೂರ್ಣವಾಗಿ ಸ್ವವಿವರ ಹಾಗೂ ಅಂಕಿತವನ್ನು ಪ್ರಕಟಿಸಿದ್ದಾರೆ.

ಪ್ರಾಚೀನ ರಾಗಗಳ ಗುಣಲಕ್ಷಣ ತಿಳಿಯಬೇಕಾದರೆ ದೀಕ್ಷಿತರ ಕೃತಿಗಳಿಗೇ ಶರಣು ಹೋಗಬೇಕು. ಇವರು ಕೈ ಆಡಿಸಿದ ಕೆಲವು ಅಪರೂಪ ರಾಗಗಳ ಕೃತಿಗಳೆಂದರೆ ಮಾಹುರಿಯ 'ಮಾಮವ ರಘುವೀರ', ಧೌತಪಂಚಮದ 'ಮಾತಂಗೀ ಮರಕತಾಂಗಿ', ನಾಸಾಮಣಿಯ 'ಶ್ರೀರಮಾಂ ಸರಸ್ವತಿ', ದ್ವಿಜಾವಂತಿಯ 'ಚೇತ ಶ್ರೀ ಬಾಲಕೃಷ್ಣಂ', ರಸಮಂಜರಿಯ 'ಶೃಂಗಾರ ರಸಮಂಜರಿ', ಝೂಲವರಾಳಿಯ 'ಮಾಮವ ಮೀನಾಕ್ಷಿ' ಸ್ತವರಾಜ ರಾಗದ 'ಮಧುರಾಂಬಾಂ ಭಜರೇ' ಇತ್ಯಾದಿ.

ದೀಕ್ಷಿತರಿಗೆ ದೇವದೇವಿಯರ ಸ್ತೋತ್ರರೂಪಗಳಾದ ಲಲಿತಾ ಸಹಸ್ರನಾಮ, ಲಲಿತಾತ್ರಿಶತೀ, ಶಂಕರಾಚಾರ್ಯರ ಸೌಂದರ್ಯ ಲಹರೀ, ಶಿವಾನಂದಲಹರೀ ಮುಂತಾದ ಸಂಸ್ಕೃತ ರಚನೆಗಳು ಅರ್ಥವತ್ತಾಗಿ ಕಂಠಪಾಠವಾಗಿದ್ದವು. ಸಹಜವಾಗಿಯೇ ಅವರ ಕೃತಿಗಳಲ್ಲಿ ಇವುಗಳ ಪ್ರಭಾವ ಎದ್ದು ಕಾಣುತ್ತದೆ. ಕೆಲವು ನಿದ ರ್ಶನಗಳನ್ನು ಕೊಡುವುದಾದರೆ ಮೋಹನ ರಾಗದ 'ಕಾದಂಬರೀ

ಪ್ರಿಯಾಯೈ' ಕೃತಿಯಲ್ಲಿ ಬರುವ 'ಸದಾಚಾರ ಪ್ರವರ್ತಿಕಾಯೈ'; ಎಂಬ ವರ್ಣನೆ ಲಲಿತಾಸಹಸ್ರನಾಮದ ನಾಮವನ್ನು ಪದಶಃ ಹೋಲುತ್ತದೆ. ಕಮಲಾ ಮನೋಹರಿ ರಾಗದ 'ಕಂಜದಳಾಯ ತಾಕ್ಷಿ' ಕೃತಿಯಲ್ಲಿ 'ಏಕಾನೇಕಾಕ್ಷರಿ' ಎಂಬುದು ಲಲಿತಾತ್ರಿಶತಿ ಯನ್ನು ಆಧರಿಸಿದೆ. ವೇಗವಾಹಿನಿ ರಾಗದ 'ವೀಣಾಪುಸ್ತಕ ಧಾರಿಣೀಂ' ಕೃತಿಯಲ್ಲಿ 'ಜಟಾಜೂಟಮಕುಟಂ' ಎಂಬ ಪದ ವನ್ನು ಸೌಂದರ್ಯಲಹರಿಯ ಶ್ಲೋಕದಿಂದ ತೆಗೆದುಕೊಂಡಿರುವು ದನ್ನು ಗಮನಿಸಬಹುದು.

ಸಾಹಿತ್ಯದಲ್ಲಿ ನಾದಕ್ಕೆ ದೀಕ್ಷಿತರು ನೀಡಿರುವ ಪ್ರಾಧಾನ್ಯವನ್ನು ಇವರು ಬಳಸಿರುವ ಅಲಂಕಾರ ವೈವಿಧ್ಯದಲ್ಲಿ ತಿಳಿಯುತ್ತೇವೆ. ಸಾಮಾನ್ಯವಾಗಿ ಶಾಸ್ತ್ರೀಯ ಸಂಗೀತದ ರಚನಕಾರರು ಬಳಸುತ್ತಿದ್ದ ಪ್ರಾಸಗಳಲ್ಲದೆ ಗೋಪುಚ್ಛ ಮತ್ತು ಶ್ರೋತೋವಾಹ ಅಲಂಕಾರ ಗಳನ್ನು ತಮ್ಮ ಕೃತಿಗಳಲ್ಲಿ ಉಪಯೋಗಿಸಿದವರು ಇವರೊಬ್ಬರೇ. ಗೋಪುಚ್ಛ ರಚನೆಯಲ್ಲಿ ಅಕ್ಷರಗಳು ಕ್ರಮವಾಗಿ ಮತ್ತು ಏಕ ಪ್ರಕಾರವಾಗಿ ಕಡಿಮೆಯಾಗುತ್ತ ಬರುತ್ತವೆ. 'ಶ್ರೋತೋವಾಹ'ದಲ್ಲಿ ತದ್ವಿರುದ್ಧ. ಆನಂದಭೈರವಿ ರಾಗದ 'ತ್ಯಾಗರಾಜ ಯೋಗ ವೈಭವಂ' ಕೃತಿಯಲ್ಲಿ ಈ ಎರಡೂ ಬಗೆಯ ಅಲಂಕಾರಗಳನ್ನು ಕಾಣ ಬಹುದು. ಪಲ್ಲವಿಯ ಸಾಹಿತ್ಯ 'ತ್ಯಾಗರಾಜ ವೈಭವಂ' ಗೋಪು ಚ್ಛಕ್ಕೆ ಉದಾಹರಣೆ: ತ್ಯಾಗರಾಜವೈಭವಂ – ಅಗರಾಜಯೋಗ ವೈಭವಂ –ರಾಜಯೋಗ ವೈಭವಂ–ಯೋಗವೈಭವಂ–ವೈಭವಂ –ಭವಂ–ವಂ. ಅದೇ ಕೃತಿಯ ಚರಣ 'ಶ್ರೋತೋವಾಹ'ಕ್ಕೆ ಒಳ್ಳೆಯ ಉದಾಹರಣೆ. ಶಂ–ಪ್ರಕಾಶಂ– ಸಕಲತತ್ತ್ವ ಪ್ರಕಾಶಂ– ಶಕ್ತ್ಯಾದಿ ಸಕಲ ತತ್ತ್ವಸ್ವರೂಪಪ್ರಕಾಶಂ–ಶಿವ ಶಕ್ತ್ಯಾದಿ ಸಕಲ ತತ್ತ್ವ ಸ್ವರೂಪ ಪ್ರಕಾಶಂ. ಈ ಪ್ರಯೋಗಗಳಲ್ಲಿ ಸಾಹಿತ್ಯದ ಏರಿಳಿತ ಮತ್ತು ಗತಿ ರಾಗ ಮತ್ತು ತಾಳಗಳ ಚೌಕಟ್ಟಿನಲ್ಲಿ ಸುಂದರವಾಗಿ ಎರಕಗೊಂಡಿವೆ. ಇದೇ ಗುಣವನ್ನು ಶ್ರೀರಾಗದ 'ಶ್ರೀವರಲಕ್ಷ್ಮೀ' ಮತ್ತು ತರಂಗಿಣಿ ರಾಗದ 'ಮಾಯೇ' ಮುಂತಾದ ಕೃತಿಗಳ ಲ್ಲಿಯೂ ಕಾಣಬಹುದು. ಇವರ ಕೃತಿಗಳಲ್ಲಿ ಶಿವ–ಶಕ್ತಿಯರಂತೆ, ಅಂದರೆ ಪುರುಷ ಪ್ರಕೃತಿಗಳಂತೆ ಸಾಹಿತ್ಯ–ಸಂಗೀತಗಳ ಮಧುರ ಮಿಲನವಾಗಿದೆ.

ಸಂಗೀತದ ದೃಷ್ಟಿಯಿಂದ ಪರಿಶೀಲಿಸಿದರೆ ದೀಕ್ಷಿತರ ಕೃತಿಗಳಲ್ಲಿ ರಾಗರಸವೇ ಪ್ರವಹಿಸುವಂತಿದ್ದು, ಸಾಕ್ಷಾತ್ ರಾಗದೇವತಾ ಲಾಸ್ಯ ಮಾಡಿದ ಅನುಭವ ಮೂಡುತ್ತದೆ. ನೀಲಾಂಬರಿಯ 'ಅಂಬ ನೀಲಾಯತಾಕ್ಷಿ', ಬೇಗಡೆಯ 'ತ್ಯಾಗರಾಜಾಯ ನಮಸ್ತೇ', ಮಧ್ಯಮಾವತಿಯ 'ಧರ್ಮಸಂವರ್ಧಿನೀ', ಹಿಂದೋಳದ 'ನೀರ ಜಾಕ್ಷಿ', ಭೈರವಿಯ 'ಬಾಲಗೋಪಾಲ', ಕಾಂಭೋಜಿಯ 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ', ಸಾವೇರಿಯ 'ಶ್ರೀರಾಜಗೋಪಾಲ' ತೋಡಿಯ 'ಶ್ರೀಕೃಷ್ಣಂ ಭಜ ಮಾನಸ' ವಸಂತದ 'ಹರಿಹರಪುತ್ರಂ' ಕಲ್ಯಾಣಿಯ 'ಶಿವಕಾಮೇಶ್ವರೀಂ' ಕನ್ನಡ ರಾಗದ 'ಶ್ರೀಮಾತೃ ಭೂತಂ' ಹಾಗೂ ನಾಯಕಿ ರಾಗದ 'ರಂಗನಾಯಕಂ' ಮುಂತಾದ ಕೃತಿಗಳು ರಾಗ ಗಾಂಭೀರ್ಯವನ್ನು ಎತ್ತಿ ತೋರಿಸುವ ದೀಕ್ಷಿತರ ಶ್ರೇಷ್ಠ ರಚನೆಗಳು.

ತಿರುತ್ತಣಿ ಕ್ಷೇತ್ರದಲ್ಲಿ ಸುಬ್ರಹ್ಮಣ್ಯಸ್ವಾಮಿಯನ್ನು ಆರಾಧಿಸಿದ ದೀಕ್ಷಿತರಿಗೆ ಸ್ವಾಮಿ ಒಬ್ಬ ವೃದ್ಧನ ರೂಪದಲ್ಲಿ ಕಾಣಿಸಿಕೊಂಡು ಅವರ ಬಾಯಿಗೆ ಕಲ್ಲುಸಕ್ಕರೆ ಚೂರು ಹಾಕಿ ಅದೃಶ್ಯನಾದ. ಒಡನೆಯೇ ದೀಕ್ಷಿತರಿಗೆ ಸಂಗೀತ ಕವಿತಾಶಕ್ತಿ ಉಂಟಾಗಿ ಕೂಡಲೇ ಆನಂದಪರವಶರಾಗಿ ಮೊತ್ತ ಮೊದಲನೆಯ ಕೃತಿಯಾದ ಮಾಯಾ ಮಾಳವಗೌಳ ರಾಗದ 'ಶ್ರೀನಾಥಾದಿ ಗುರುಗುಹೋ ಜಯತಿ' ಆವಿರ್ಭವಿಸಿತು. ಇದರಲ್ಲಿ ಗುರುವಂದನೆಯ ರೂಪದಲ್ಲಿ ದೀಕ್ಷಾ ಗುರುಗಳಾದ ಚಿದಂಬರನಾಥಯೋಗಿಗಳನ್ನು ಸ್ಮರಿಸಿದ್ದಾರೆ. ಪುರಂದರದಾಸರ ಕಾಲದಿಂದಲೂ ಕರ್ನಾಟಕ ಸಂಗೀತಾಭ್ಯಾಸಿಗಳಿಗೆ ಹೇಳಿಕೊಡುತ್ತಿರುವ ಮಾಯಾಮಾಳವಗೌಳದಲ್ಲೇ ಈ ಕೃತಿ ಇರುವುದೊಂದು ವಿಶೇಷ.

ದೀಕ್ಷಿತರು ವಿವಾದಿ ಮೇಳಗಳನ್ನು ಉಪಯೋಗಿಸಿ ಕೃತಿಗಳನ್ನು ರಚಿಸಿರುವುದು ಅವರ ರಾಗ ಕೌಶಲವನ್ನು ಎತ್ತಿ ತೋರಿಸುತ್ತದೆ. ಕನಕಾಂಬರ ರಾಗದ (ಕನಕಾಂಗಿ: ಒಂದನೇ ಮೇಳ) 'ಕನಕಾಂಬರಿ ಕಾರುಣ್ಯಾಮೃತ ಲಹರಿ', ಫೇನದ್ಯುತಿ ರಾಗದ (ಎರಡನೆಯ ಮೇಳ) 'ಶ್ರೀದಕ್ಷಿಣಾಮೂರ್ತಿಂ', ಕಲಾವತಿ ರಾಗದ (ಮೂವ ತ್ತೊಂದನೆಯ ಮೇಳ) 'ಕಲಾವತಿ ಕಮಲನವ ಯುವತಿ' ಮತ್ತು ವಂಶವತಿರಾಗದ (ಐವತ್ತನಾಲ್ಕನೆಯ ಮೇಳ) 'ಭಕ್ತವತ್ಸಲಂ' ಕೃತಿ ಗಳು ಉದಾಹರಣೆಗಳು.

ಸಮುದಾಯ ಕೀರ್ತನೆಗಳನ್ನು ರಚಿಸುವುದರಲ್ಲಿ ಅವರು ಸಿದ್ಧಹಸ್ತರು. ಗುರುಗುಹ ಕೃತಿಗಳು, ಪಂಚಭೂತಲಿಂಗ ಸ್ಥಳಗಳ ಕೀರ್ತನೆಗಳು, ಅಭಯಾಂಬಾ ವಿಭಕ್ತಿ ಕೃತಿಗಳು, ತಿರುವಾರೂರು ಶ್ರೀ ತ್ಯಾಗರಾಜಸ್ವಾಮಿಯನ್ನು ಕುರಿತ ಕೃತಿಗಳು, ನೀಲೋತ್ಪ ಲಾಂಬಾ ಕೃತಿಗಳು, ನವಗ್ರಹ ಕೃತಿಗಳು, ಮಧುರೈ ಮೀನಾಕ್ಷಿ ಅಮ್ಮನವರ ಮೇಲೆ ರಚಿಸಿರುವ ಎಂಟು ವಿಭಕ್ತಿ ಕೃತಿಗಳು ಮತ್ತು ಕಮಲಾಂಬ ನವಾವರಣಗಳು ಈ ಸಾಲಿಗೆ ಸೇರಿವೆ.

ದೀಕ್ಷಿತರು 'ಗಾಣಾಪತ್ಯ'ದಲ್ಲಿ ಅಂದರೆ ಗಣಪತಿಯನ್ನು ಪೂಜಿಸುವ ಶಾಸ್ತ್ರದಲ್ಲಿ ನಿಸ್ಸೀಮರು. ಅವರ ಗಣಪತಿ ಸ್ತುತಿಗಳು ಆ ಶಾಸ್ತ್ರದಲ್ಲಿ ಅವರಿಗಿದ್ದ ಪಾಂಡಿತ್ಯದ ದ್ಯೋತಕಗಳು. ಗಣೇಶನ ಪರವಾಗಿ ಅವರು ರಚಿಸಿರುವಷ್ಟು ಕೀರ್ತನೆಗಳನ್ನು ಬೇರೆ ಯಾರೂ ರಚಿಸಿಲ್ಲ. ಸುಮಾರು ಹದಿನಾರು ಕೀರ್ತನೆಗಳಿವೆ. ಅವನ್ನು 'ಷೋಡಶ ಗಣಪತಿ' ಕೀರ್ತನೆಗಳೆನ್ನುತ್ತಾರೆ. ಅವುಗಳ ರಾಗ ಮತ್ತು ಕೃತಿಗಳ ಹೆಸರು ಹೀಗಿವೆ: ಹಂಸಧ್ವನಿ– 'ವಾತಾಪಿ ಗಣಪತಿಂ' ಮಲಹರಿ–'ಪಂಚಮಾತಂಗ ಮುಖ ಗಣಪತಿಂ' ಶ್ರೀ –'ಶ್ರೀಮೂಲಾಧರಚಕ್ರ ವಿನಾಯಕಂ', ನಟನಾರಾಯಣಿ 'ಮಹಾ ಗಣಪತೇ ಪಾಲಯಾಶುಮಾಂ' ಶಂಕರಾಭರಣ–'ಶಕ್ತಿಸಹಿತ ಗಣ ಪತಿಂ', ಕಾಶಿರಾಮಕ್ರಿಯ– (ಪಂತುವರಾಳಿ, ಕಾಮವರ್ಧಿನಿ)

'ಉಚ್ಛಿಷ್ಟಗಣಪತಿಂ', ಪೂರ್ಣಷಡ್ಜ–'ಗಣನಾಯಕಂ', ರಾಗ ಚೂಡಾಮಣಿ–'ಶ್ವೇತಗಣಪತಿಂ', ಮೋಹನ– 'ರಕ್ತಗಣಪತಿಂ', ಆರಭಿ–'ಗಣರಾಜೇನ',ಚಾಮರ(ಷಣ್ಮುಖಪ್ರಿಯ)–'ಸಿದ್ಧಿವಿನಾಯಕಂ', ವೇಗವಾಹಿನಿ(ಚಕ್ರವಾಕ)–'ಗಜಾನನಯುತಂ', ಬೇಗಡೆ– 'ವಲ್ಲಭ ನಾಯಕಸ್ಯ', ವರಾಳಿ– 'ಲಂಬೋದರಾಯ', ಈಶ ಮನೋಹರಿ– 'ಶ್ರೀಗಣನಾಥಂ ಭಜರೇ', ನವರೋಜು– 'ಹಸಿತ ವದನಾಯ'. ಇವಲ್ಲದೆ ಗಣಪತಿಯನ್ನು ಕುರಿತ ಇವರ ಇನ್ನು ಕೆಲವು ರಚನೆಗಳೆಂದರೆ ಸಾವೇರಿಯ 'ಕರಿಕಳಭಮುಖಂ', ಜುಂಜೋಟಿಯ 'ಗಣೇಶಕುಮಾರ', ಗೌಳ ರಾಗದ 'ಶ್ರೀಮಹಾಗಣಪತಿ ರವತು ಮಾಂ', ಬಿಲಹರಿಯ 'ಏಕದಂತಂ ಭಜೇಽಹಂ', ಆರ್ದ್ರದೇಶಿ ರಾಗದ 'ಶ್ರೀಗಣೇಶಾತ್ಪರಮ್', ರುದ್ರಪ್ರಿಯ ರಾಗದ 'ರುದ್ರ ಕೋಪಜಾತ', ತೋಡಿ ರಾಗದ 'ಮಹಾಗಣಪತಿಂ' ಮತ್ತು ನಾಟ ರಾಗದ 'ಮಹಾಗಣಪತಿಂ' ಇತ್ಯಾದಿ.

ದೀಕ್ಷಿತರು ಕೆಲವು ಮಣಿಪ್ರವಾಳ ಕೃತಿಗಳನ್ನು ರಚಿಸಿದ್ದಾರೆ. ಅಂದರೆ ಒಂದೇ ಕೀರ್ತನೆಯ ರಚನೆಯಲ್ಲಿ ಸಂಸ್ಕೃತ, ತೆಲುಗು ಮತ್ತು ತಮಿಳು ಈ ಮೂರು ಭಾಷೆಗಳೂ ಇರುವುದು. ಉದಾಹರಣೆಗೆ ಶ್ರೀರಾಗದ 'ಶ್ರೀ ಅಭಯಾಂಬಾ ನಿನ್ನು' ಮತ್ತು ಕಾಪಿ ರಾಗದ 'ವೆಂಕಟಾಚಲಪತೇ ನಿನ್ನು ನಮ್ಮಿತಿ' ಇತ್ಯಾದಿ.

ಅವರಿಗೆ ನಲುವತ್ತೆರಡು ವರ್ಷ ವಯಸ್ಸಾದಾಗ ಅವರ ತಂದೆ, ತಾಯಿ ಮಡಿದರು. ಆಗ ಮನಶ್ಶಾಂತಿಗೋಸ್ಕರ ಅವರು ತೀರ್ಥ ಯಾತ್ರೆಗೆ ಹೊರಟರು. ಮೊದಲು ಕಾಂಚೀಪುರ ತಲುಪಿ ಅಲ್ಲಿಯ ಭುವನಮೋಹಿನಿಯಾದ ಕಾಮಾಕ್ಷಿ ಅಮ್ಮನವರನ್ನು ದರ್ಶನ ಮಾಡಿದರು. ಕಮಲಾಮನೋಹರಿ ರಾಗದಲ್ಲಿ 'ಕಂಜದಳಾಯ ತಾಕ್ಷಿ ಕಾಮಾಕ್ಷಿ' ಕೃತಿಯನ್ನೂ, ಹಿಂದೋಳ ರಾಗದಲ್ಲಿ 'ನೀರಜಾಕ್ಷಿ ಕಾಮಾಕ್ಷಿ' ಕೃತಿಯನ್ನೂ, ಬಿಲಹರಿ ರಾಗದಲ್ಲಿ 'ಕಾಮಾಕ್ಷಿ' ಕೃತಿಯನ್ನೂ ರಚಿಸಿ ಅಮ್ಮನವರಿಗೆ ಕೀರ್ತನ ಕುಸುಮಗಳನ್ನು ತಮ್ಮ ಹೃನ್ಮನಗಳಿಂದ ಅರ್ಪಿಸಿದರು. ಅನಂತರ ಏಕಾಂಬರ ದೇವರ ದರ್ಶನಕ್ಕೆ ಹೋಗಿ ಸ್ವಾಮಿಯನ್ನು ಕುರಿತು ಗಮಕಕ್ರಿಯ ರಾಗದಲ್ಲಿ 'ಏಕಾಂಬರನಾಥಂ ಭಜೇಽಹಂ' ಕೃತಿಯನ್ನು ಹಾಡಿ, ಶ್ರೀರಂಗಕ್ಕೆ ಬಂದು ಮಹಾಲಕ್ಷ್ಮೀ ದೇವಿಯನ್ನು ಕುರಿತು ಶ್ರೀರಾಗದಲ್ಲಿ 'ಶ್ರೀವರಲಕ್ಷ್ಮೀ' ಕೃತಿಯನ್ನೂ ಮಾಧವ ಮನೋಹರಿ ರಾಗದಲ್ಲಿ 'ಮಹಾಲಕ್ಷ್ಮೀ' ಕೃತಿಯನ್ನೂ ಹಾಡಿ ಮಧುರೆಗೆ ಹೋದರು. ಅಲ್ಲಿ ಮೀನಾಕ್ಷಿ ಅಮ್ಮನವರ ಮೇಲೆ ವರಾಳಿ ರಾಗದಲ್ಲಿ 'ಮಾಮವ ಮೀನಾಕ್ಷಿ' ಎಂಬ ಕೃತಿಯನ್ನು ರಚಿಸಿ ದೇವಿಯನ್ನು ಸ್ತುತಿಸಿದರು. ಅಲ್ಲಿಂದ ನಾಗಪಟ್ಟಣಕ್ಕೆ ಬಂದು, ನೀಲಾಂಬರಿ ರಾಗದಲ್ಲಿ 'ಅಂಬ ನೀಲಾಯತಾಕ್ಷಿ' ಕೃತಿಯನ್ನೂ ಮನ್ನಾರುಗುಡಿಯಲ್ಲಿ ಶ್ರೀರಾಜ ಗೋಪಾಲ ಸ್ವಾಮಿಯನ್ನು ಕುರಿತು ಸಾವೇರಿಯಲ್ಲಿ 'ಶ್ರೀ ರಾಜ ಗೋಪಾಲ' ಕೃತಿಯನ್ನೂ ಹಾಡಿದರು.

ಮಾರ್ಗದಲ್ಲಿ ಕೀಲೂರಿಗೆ ಭೇಟಿಕೊಟ್ಟು ಅಕ್ಷಯಲಿಂಗವೆಂಬ ಪ್ರಾಚೀನ ದೇವಾಲಯಕ್ಕೆ ಹೋದಾಗ ಅರ್ಚಕರು ಪೂಜೆಯನ್ನು ಮುಗಿಸಿ ಬಾಗಿಲು, ಹಾಕಿಕೊಂಡು ಹೊರಡುತ್ತಿದ್ದ ವೇಳೆಯಾದ್ದರಿಂದ ದೀಕ್ಷಿತರು ಅವರನ್ನು ಕುರಿತು 'ಸ್ವಾಮಿ ನಾನು ತಿರುವಾರೂರಿನಿಂದ ಇಲ್ಲಿಗೆ ದೇವರ ದರ್ಶನಕ್ಕಾಗಿಯೇ ಬಂದಿದ್ದೇನೆ. ದಯವಿಟ್ಟು ಒಂದು ಕ್ಷಣ ದೇವರ ದರ್ಶನ ಮಾಡಿಸಿ' ಎಂದು ಕೋರಿದರು. ಆಗ ಅರ್ಚಕರು 'ನಾಳೆ ಬನ್ನಿ, ದೇವರು ಎಲ್ಲೂ ಓಡಿ ಹೋಗಲ್ಲ' ಎಂದಾಗ ದೀಕ್ಷಿತರು ಬಾಗಿಲಲ್ಲೇ ಕುಳಿತು ಶಂಕರಾಭರಣ ರಾಗದಲ್ಲಿ 'ಅಕ್ಷಯಲಿಂಗ ವಿಭೋ ಸ್ವಯಂಭೋ' ಎಂಬ ಕೃತಿಯನ್ನು ಹಾಡಲು ಆರಂಭಿಸಿದರು. ಅದು ಮುಕ್ತಾಯಕ್ಕೆ ಬರುವ ವೇಳೆಗೆ ಆಶ್ಚರ್ಯ! ಗರ್ಭಗುಡಿಯ ಪಡಿಗಳು ತಮ್ಮಷ್ಟಕ್ಕೇ ತಾವೇ ತೆರೆದುಕೊಂಡು ಸ್ವಾಮಿಯ ದರ್ಶನಕ್ಕೆ ಎಡೆಮಾಡಿಕೊಟ್ಟವಂತೆ. ಪೂರ್ಣಭಕ್ತಿಯ ಫಲಕ್ಕೆ ಈ ಘಟನೆ ಒಂದು ನಿದರ್ಶನ.

ಇದೇರೀತಿ ಒಮ್ಮೆ ಯಾತ್ರಾರ್ಥಿಯಾಗಿ ಹೋಗುತ್ತಿದ್ದಾಗ ಒಂದೆಡೆ ನೀರಿಲ್ಲದೆ ದನಕರುಗಳು ಪರಿತಪಿಸುತ್ತಿದ್ದುದನ್ನು ಕಂಡು ಅಮೃತವರ್ಷಿಣಿ ರಾಗದಲ್ಲಿ 'ಆನಂದಾಮೃತಾಕರ್ಷಿಣಿ' ಎಂಬ ಕೃತಿಯನ್ನು ಹಾಡಿ ಮುಕ್ತಾಯಗೊಳಿಸಿದಾಗ ಜೋರಾಗಿ ಮಳೆ ಸುರಿಯಿತು. ಅನಂತರ 'ಸ್ತಂಭಯ' ಎಂದು ಹಾಡಿ ಸುರಿಯುತ್ತಿದ್ದ ಮಳೆಯನ್ನು ನಿಲ್ಲಿಸಿದರೆಂದು ಪ್ರತೀತಿ.

ಅವರ ತಂದೆ ರಾಮಸ್ವಾಮಿ ದೀಕ್ಷಿತರು ಹಂಸಧ್ವನಿ ರಾಗವನ್ನು ಉಪಜ್ಞಿಸಿದರು. ಈ ಮಗನೇ ಅಮೃತವರ್ಷಿಣಿ ರಾಗದ ಉಪಜ್ಞೆಕಾರ (inventor.)

ದೀಕ್ಷಿತರು ತಮ್ಮ ರಚನೆಗಳಲ್ಲಿ ರಾಗದ ಹೆಸರು ಒಟ್ಟು ಸಾಹಿತ್ಯಕ್ಕೆ ನೇರವಾಗಿ ಹೊಂದುವಾಗ ಅದನ್ನೇ ಬಳಸಿ, ಅಸಾಧ್ಯವಾದಾಗ ಚಮತ್ಕಾರದಿಂದ ಸಮಾವೇಶ ಮಾಡಿದ್ದಾರೆ. ಉದಾಹರಣೆಗೆ: ಆರಭಿ–ಸಂಸಾರಭೀತ್ಯಾಪಹೇ, ಧನ್ಯಾಸಿ–ಮೂರ್ಧನ್ಯಾರವೇ ಸುರಟಿ–ಭೂಸುರಟೀಕಾದಿ, ಶಹನ–ಈಶನಾದಿ, ಅಹಿರಿ – ರಮಾಹರಿಕಾ ಇತ್ಯಾದಿ.

ದೀಕ್ಷಿತರು ಎಂದೂ ನರಸ್ತುತಿಯನ್ನು ಮಾಡಿ ಕೃತಿ ರಚಿಸಿದವರಲ್ಲ. ಅದಕ್ಕೆ ಒಂದು ನಿದರ್ಶನ ಅವರ ಲಲಿತರಾಗದ 'ಹಿರಣ್ಮಯೀಂ ಲಕ್ಷ್ಮೀಂ' ಕೃತಿಯ ಸಂದರ್ಭ ಮತ್ತು ತಾತ್ಪರ್ಯ: ತಂಜಾವೂರು ಮಹಾರಾಜರನ್ನು ಕುರಿತು ಕೃತಿ ರಚಿಸಿ ಆಸ್ಥಾನದಲ್ಲಿ ಹಾಡಿದರೆ ಧನಕನಕ ಐಶ್ವರ್ಯ ದೊರಕುವುದು ಎಂದು ಸೂಚಿಸಿದರಂತೆ ದೀಕ್ಷಿತರ ಪತ್ನಿ. ಆಗ ದೀಕ್ಷಿತರು, ''ನಾನು ಈ ರೀತಿ ಎಂದೂ ಮಾಡುವುದಿಲ್ಲ; ನಿನಗೆ ಐಶ್ವರ್ಯ ಬೇಕಾದರೆ ನಾನು ದೇವರನ್ನು ಪ್ರಾರ್ಥಿಸುತ್ತೇನೆ. ನರಮನುಷ್ಯನನ್ನು ಖಂಡಿತ ಇಲ್ಲ. ನಶ್ವರವಾದ ಐಶ್ವರ್ಯವನ್ನಂತೂ ಅಲ್ಲವೇ ಅಲ್ಲ. ಆದರೆ ಎಂದೆಂದಿಗೂ ಶಾಶ್ವತವಾದ ಐಶ್ವರ್ಯವೆಂಬ ಜೀವನ್ಮುಕ್ತಿಯನ್ನು ದಯಪಾಲಿಸುವ ಲಕ್ಷ್ಮೀದೇವಿಯನ್ನು ಪ್ರಾರ್ಥಿಸುತ್ತೇನೆ'' ಎಂದು ಹೇಳಿ ತಂಜಾವೂರು ಶ್ರೀ ರಾಜಗೋಪಾಲಸ್ವಾಮಿಯ ದೇವಾಲಯಕ್ಕೆ ಹೋಗಿ ಅಲ್ಲಿಯ ಅಮ್ಮನವರ ಸನ್ನಿಧಿಯಲ್ಲಿ 'ಹಿರ

ಣ್ಮಯೀಂ ಲಕ್ಷ್ಮೀಂ' ಕೃತಿಯನ್ನು ಹಾಡಿದರು. ಅದೇ ರಾತ್ರಿ ಅವರ ಕನಸಿನಲ್ಲಿ ಸರ್ವಾಲಂಕಾರಭೂಷಿತೆಯಾಗಿ ದೇದೀಪ್ಯ ಮಾನವಾಗಿ ಕಂಗೊಳಿಸುತ್ತ ಲಕ್ಷ್ಮಿಯು ಪ್ರತ್ಯಕ್ಷಳಾಗಿ 'ನಿನಗೆ ಬಡತನವಿಲ್ಲ' ಎಂದಳು. ಅಂದೇ ಅವರ ಪತ್ನಿಯ ಕನಸಿನಲ್ಲಿ ಮಹಾಲಕ್ಷ್ಮಿಯು ಕಾಣಿಸಿಕೊಂಡು ''ಒಡವೆಗಳು ಸಾಕೆ?'' ಎಂದು ಕೇಳಿದಳು. ಮಾರನೇ ದಿನ ಬೆಳಿಗ್ಗೆ ದೀಕ್ಷಿತರ ಪತ್ನಿ, ''ನನ್ನನ್ನು ಕ್ಷಮಿಸಿ, ನಾನು ಆ ರೀತಿ ನಶ್ವರ ಐಶ್ವರ್ಯವನ್ನು ಅಪೇಕ್ಷಿಸಿದ್ದು ತಪ್ಪು'' ಎಂದು ಪಶ್ಚಾತ್ತಾಪಪಟ್ಟರಂತೆ.

ಜ್ಯೋತಿಶ್ಶಾಸ್ತ್ರದಲ್ಲಿ ಪಾರಂಗತರಾಗಿದ್ದ ದೀಕ್ಷಿತರು ರಚಿಸಿರುವ ನವಗ್ರಹ ಕೀರ್ತನೆಗಳು ಕರ್ನಾಟಕ ಸಂಗೀತಕ್ಕೆ ಅತ್ಯಮೂಲ್ಯ ಕೊಡುಗೆಗಳು. ರಾಗ ವಿಸ್ತಾರ ದೃಷ್ಟಿಯಿಂದ ಇವು ಗಹನವಾಗಿದೆ. ತಾಳದ ದೃಷ್ಟಿಯಿಂದ ಕರ್ನಾಟಕ ಸಂಗೀತದ ಸುಳಾದಿ ಸಪ್ತತಾಳ ಗಳಲ್ಲಿ ಕ್ರಮವಾಗಿ ಮೊದಲಿನ ಏಳು ಕೃತಿಗಳನ್ನು ರಚಿಸಿರುವುದು ಅವರಿಗೆ ತಾಳದಲ್ಲಿದ್ದ ಅಸಾಧಾರಣ ಪ್ರಭುತ್ವವನ್ನು ತೋರಿಸುತ್ತದೆ.

ತಂಜಾವೂರು ಸಹೋದರರಾದ ಪೊನ್ನಯ್ಯ, ಚಿನ್ನಯ್ಯ, ಶಿವಾನಂದಂ, ವಡಿವೇಲು ಮತ್ತು ಮೃದಂಗ ತಂಬಿಯಪ್ಪ, ತಿರುವಾರೂರು ಕಮಲ, ಕೊರ್ನಾಡ್ ರಾಮಸ್ವಾಮಿ ಮತ್ತು ತಿರುತ್ತಡೆಯೂರು ಭಾರತೀ ಇವರು ದೀಕ್ಷಿತರ ಪ್ರಮುಖ ಶಿಷ್ಯರು. ಇವರುಗಳ ಮೂಲಕ ಈಗ ಪ್ರಚಲಿತವಿರುವ ಕೃತಿಗಳು ಸಂಗೀತ ಪ್ರಪಂಚಕ್ಕೆ ಲಭ್ಯವಾಗಿದೆ.

ದೀಕ್ಷಿತರ ಅತ್ಯುತ್ತಮ ರಚನೆಗಳಲ್ಲಿ ನವಾವರಣ ಕೃತಿಗಳಿಗೆ ಅಗ್ರಸ್ಥಾನ ಸಲ್ಲುತ್ತದೆ. ರಚನಾಶೈಲಿ, ಸಾಹಿತ್ಯ, ರಾಗಭಾವ, ತಾಳದ ಚೌಕಟ್ಟು ಎಲ್ಲ ದೃಷ್ಟಿಗಳಿಂದಲೂ ಇವು ಉಕ್ಕಿನ ಕಡಲೆಗಳು. ಆದರೆ ಇವುಗಳ ಅಂತರಾರ್ಥವನ್ನು ಅರಿತು ಸಾಧನೆ ಮಾಡಿ ಜೀರ್ಣಿಸಿಕೊಂಡರೆ ದೊರಕುವ ಆನಂದ ಮಾತ್ರ ಅವರ್ಣನೀಯ. ಅದರಲ್ಲೂ ತೋಡಿ ರಾಗದ ಕೀರ್ತನೆಯಲ್ಲಿ ಪ್ರತಿ ಅಕ್ಷರದ ಸಾಹಿತ್ಯದಲ್ಲಿ ರಾಗದ ಪೂರ್ಣ ಸೌಂದರ್ಯ ಬರುವಂತೆ ರಚಿಸಿದ್ದಾರೆ. ಇದನ್ನು 'ಶ್ರೀ ಕಮಲಾಂಬಾ ನವಾವರಣ' ಎಂದೂ ಹೇಳುವುದುಂಟು. ಕಮಲಾಂಬ ದೇವಿಯನ್ನು ಕುರಿತ ಸ್ತೋತ್ರ ಕೃತಿಗಳಿವು.

ದೀಕ್ಷಿತರು ಶ್ರೀವಿದ್ಯಾ ಉಪಾಸಕರು ಮತ್ತು ಶ್ರೀಚಕ್ರಕ್ಕೆ ಪೂಜೆ ಸಲ್ಲಿಸಿ ಆ ಮಹಾಯಂತ್ರದ ತಂತ್ರವಿದ್ಯೆಯನ್ನು ಚೆನ್ನಾಗಿ ಬಲ್ಲವರು. ನವಾವರಣ ಕೀರ್ತನೆಗಳಲ್ಲಿ ಅವರು ತಿರುವಾವೂರು ಕ್ಷೇತ್ರಾಧಿಪತಿ ತ್ಯಾಗರಾಜಸ್ವಾಮಿಯ ಅರ್ಧಾಂಗಿ ಕಮಲಾಂಬಿಕೆಯನ್ನು ಶ್ರೀಚಕ್ರದ ಸ್ವಾಮಿನಿಯಾದ ಜಗನ್ಮಾತೆಯ ರೂಪದಲ್ಲಿ ಸ್ತುತಿಸಿದ್ದಾರೆ. ನವಾವರಣದ ಪ್ರಧಾನ ಶಕ್ತಿಯ ಸುತ್ತ ಒಂಬತ್ತು ಚಕ್ರಗಳಿದ್ದು, ಒಂದೊಂದು ಕೀರ್ತನೆಯಲ್ಲೂ ಒಂದೊಂದು ಚಕ್ರದ ಅಧಿದೇವತಾ ಸ್ವರೂಪಿಣಿಯದ ಶ್ರೀ ಲಲಿತಾ ಮಹಾತ್ರಿಪುರಸುಂದರೀ ದೇವಿಯ ಪ್ರಾರ್ಥನೆಯಿದೆ. ಗಾಯತ್ರೀ ಮಂತ್ರದ ಬೀಜಾಕ್ಷರಗಳನ್ನು ಬಳಸಿಕೊಂಡು ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳನ್ನು ರಚಿಸಿದಂತೆ ಶಕ್ತಿ ಮಂತ್ರ ಬೀಜಾಕ್ಷರಗಳನ್ನು ಬಳಸಿಕೊಂಡು ಈ ಕೀರ್ತನೆಗಳ ಸಾಹಿತ್ಯವನ್ನು ರಚಿಸಿದ್ದಾರೆ. ಈ ಕೀರ್ತನೆಗಳ ಭಾವ ಮತ್ತು ತತ್ತ್ವವನ್ನು ಅರ್ಥಮಾಡಿಕೊಳ್ಳಲು ವಿಶೇಷ ಅಧ್ಯಯನ ಮಾಡಬೇಕಾಗುತ್ತದೆ. ನವರಾತ್ರಿ ಸಂದರ್ಭದಲ್ಲಿ ಈ ಮಾಲಿಕೆಯನ್ನು ಹಾಡುವ ಕ್ರಮವಿದೆ.

ಈ ಕೃತಿಗುಚ್ಛದಲ್ಲಿ ಒಟ್ಟು ಹದಿಮೂರು ಕೃತಿಗಳಿವೆ. ಗಣಪತಿ ಮತ್ತು ಸುಬ್ರಹ್ಮಣ್ಯಸ್ವಾಮಿಯ ಪ್ರಾರ್ಥನಾರೂಪದ ಮೊದಲೆರಡು ಕೀರ್ತನೆಗಳನ್ನು ನವರಾತ್ರಿ ಪಾಡ್ಯದ ಹಿಂದಿನ ದಿನ, ಅಂದರೆ ಮಹಾಲಯ ಅಮಾವಾಸ್ಯೆಯಂದು ಹಾಡಬೇಕು. ತೋಡಿ ರಾಗದ ಕೀರ್ತನೆಯನ್ನು ಹಾಡಿದ ಅನಂತರ ಪಾಡ್ಯದಿಂದ ಆರಂಭಮಾಡಿ ದಿನಕ್ಕೊಂದು ಕೀರ್ತನೆಯಂತೆ ಕ್ರಮವಾಗಿ ಹಾಡಿ ವಿಜಯದಶಮಿಯಂದು ಶ್ರೀರಾಗದ ಮಂಗಳ ಕೀರ್ತನೆಯನ್ನು ಹಾಡಿ ಮುಗಿಸುವುದು ವಾಡಿಕೆ. ನವಾವರಣದ ಕೊನೆಯ ಕೃತಿ ಆಹಿರಿ ರಾಗದಲ್ಲಿ ರಚಿಸಿರುವುದರಿಂದ ಮಂಗಳಪ್ರಧಾನವಾದ ರಾಗವನ್ನು ಹಾಡದೆ ಇರುವುದು ಸಂಪ್ರದಾಯವಲ್ಲ ಎಂದು ಚೆನ್ನಾಗಿ ಅರಿತಿದ್ದ ದೀಕ್ಷಿತರು, ಶ್ರೀರಾಗದ ಕೃತಿಯೊಂದಿಗೆ ಈ ಗುಚ್ಛಕ್ಕೆ ಮಂಗಳ ಹಾಡಿದ್ದಾರೆ.

ಈ ಹದಿಮೂರು ಕೀರ್ತನೆಗಳಿಗೆ ದೀಕ್ಷಿತರು ಬಳಸಿರುವ ರಾಗಗಳು ಅನುಕ್ರಮವಾಗಿ ಗೌಳ, ಸುರಟಿ, ತೋಡಿ, ಆನಂದಭೈರವಿ, ಕಲ್ಯಾಣಿ, ಶಂಕರಾಭರಣ, ಕಾಂಬೋಧಿ, ಭೈರವಿ, ಪುನ್ನಾಗವರಾಳಿ, ಶಹನ, ಘಂಟ, ಆಹಿರಿ ಮತ್ತು ಶ್ರೀರಾಗ. ರಾಗದ ಹೆಸರನ್ನು ಸಾಹಿತ್ಯದಲ್ಲಿ ಚಮತ್ಕಾರವಾಗಿ ಜೋಡಿಸುವುದು ದೀಕ್ಷಿತರ ರಚನೆಗಳ ವ್ಯಶಿಷ್ಟ್ಯ. ಅಲ್ಲದೆ ಸಂಸ್ಕೃತ ಸಾಹಿತ್ಯದಲ್ಲಿ ಸಂಬೋಧನಾ ವಿಭಕ್ತಿಯೂ ಸೇರಿ ಒಟ್ಟು ಎಂಟು ವಿಭಕ್ತಿಗಳನ್ನೂ ಪ್ರಥಮಾವರಣದ ಆನಂದಭೈರವಿ ರಾಗದ ಕೀರ್ತನೆಯಿಂದ ಘಂಟಾ ರಾಗದ ಅಷ್ಟಾವರಣದ ಕೀರ್ತನೆಯವರೆಗೆ ಕ್ರಮವಾಗಿ ಬಳಸಿರುವುದು ಗಮನಿಸಬೇಕಾದ ಮತ್ತೊಂದು ಅಂಶ. ಆಹಿರಿರಾಗದ ನವಮಾವರಣದ ಕೀರ್ತನೆಯಲ್ಲಿ ಏಳು ವಿಭಕ್ತಿಗಳೂ ಸೇರಿವೆ. ಅವರು ಅದ್ವೈತಿಗಳಾದ್ದರಿಂದ ಸಂಬೋಧನಾ ವಿಭಕ್ತಿಯನ್ನು ಬಿಟ್ಟಿರಬಹುದು. ನವಮಾವರಣದ ಕೀರ್ತನೆಯಲ್ಲಿ ಸಂಬೋಧನೆಗೆ ಅವಕಾಶವಿಲ್ಲದೆ 'ಅಹಂ ಬ್ರಹ್ಮಾಸ್ಮಿ' ತತ್ತ್ವವನ್ನು ಪ್ರತಿಪಾದಿಸಿರಬಹುದೇನೋ ಎಂದು ಕೆಲವು ಸಂಗೀತಜ್ಞರ ಅಭಿಪ್ರಾಯ.

ದೀಕ್ಷಿತರ ರಚನೆಗಳಲ್ಲಿ ಏನಾದರೂ ಒಂದು ವಿಶೇಷ ಯೋಜನೆ ಇದ್ದೇ ಇರುತ್ತದೆ. ಉದಾಹರಣೆಗೆ ನವಮಾವರಣದ ಕೀರ್ತನೆಗೆ ಆಹಿರಿ ರಾಗ ಆವರಿಸಿಕೊಂಡಿರುವುದನ್ನು ಗಮನಿಸಬೇಕು. ಹನ್ನೆರಡು ಸ್ವರಸ್ಥಾನಗಳಲ್ಲಿ ಪ್ರತಿಮಧ್ಯಮವೊಂದನ್ನು ಬಿಟ್ಟು ಉಳಿದ ಹನ್ನೊಂದು ಸ್ವರಸ್ಥಾನಗಳೂ ಬರುವ ಒಂದೇ ಒಂದು ರಾಗವೆಂದರೆ ಆಹಿರಿ. ಪ್ರತಿಮಧ್ಯಮ ಸ್ವರ ಜೋಡಣೆಯಿಂದ ಕಿವಿಗೆ ಹಿತವಾಗುವುದಿಲ್ಲ ಎನ್ನುವುದು ಅವರ ದೃಷ್ಟಿಯಾಗಿರಬೇಕು. ನವಾವರಣ ಕೃತಿಗಳಲ್ಲಿ 'ದೇವೀ ಖಡ್ಗಮಾಲಾ

ಸ್ತೋತ್ರ'ದಲ್ಲಿ ಬರುವಂತೆ ಕ್ರಮವಾಗಿ ಚಕ್ರಗಳ ಹೆಸರು, ಆಯಾ ಚಕ್ರದ ಯೋಗಿನಿಯರ ಹೆಸರು, ಚಕ್ರೇಶ್ವರಿಯರ ಹೆಸರು, ಚಕ್ರದ ಗುಣಲಕ್ಷಣಗಳು ಅರ್ಥಪೂರ್ಣವಾಗಿ ಬರುವಂತೆ ರಚಿಸಿರುವುದು ಅವರ ಪಾಂಡಿತ್ಯದ ದ್ಯೋತಕವಾಗಿದೆ.

ಶ್ರೀ ತ್ಯಾಗರಾಜಸ್ವಾಮಿಯ ದೇವಾಲಯದ ಆವರಣದಲ್ಲಿ ಇನ್ನೊಂದು ಗುಡಿ ಇದೆ. ಸ್ಥಳಪುರಾಣದ ಪ್ರಕಾರ ಪಾರ್ವತಿಯು ಶಿವನನ್ನು ಮದುವೆಯಾಗಬೇಕೆಂದು ತಪಸ್ಸು ಮಾಡುತ್ತಿದ್ದುದರಿಂದ ಶ್ರೀ ನೀಲೋತ್ಪಲಾಂಬಾ ಎಂಬ ಹೆಸರು ಬಂತೆಂದು ಗೊತ್ತಾಗುತ್ತದೆ. ಈ ನೀಲೋತ್ಪಲಾಂಬಾ ದೇವಿಯನ್ನು ಕುರಿತು ದೀಕ್ಷಿತರು ಗೌಳ ವರ್ಗದ ಕೃತಿಗಳನ್ನು ರಚಿಸಿದ್ದಾರೆ. ಈ ಎಂಟು ಕೃತಿಗಳೂ ಕಮಲಾಂಬ ನವಾವರಣದ ರೀತಿ ಎಂಟು ವಿಭಕ್ತಿಗಳಿದ್ದು, 'ಗೌಳ' ಎಂದು ಕೊನೆಗೊಳ್ಳುವ ಹೆಸರುಳ್ಳ ರಾಗದಲ್ಲಿವೆ. ಆ ರಾಗಗಳೆಂದರೆ ಕ್ರಮವಾಗಿ ನಾರಾಯಣಗೌಳ, ರೀತಿಗೌಳ, ಕನ್ನಡಗೌಳ, ಕೇದಾರಗೌಳ, ಗೌಳ, ಮಾಯಾಮಾಳವಗೌಳ ಮತ್ತು ಅಪೂರ್ವ ರಾಗಗಳಾದ ಪೂರ್ವಗೌಳ ಮತ್ತು ಛಾಯಾಗೌಳ. ಒಟ್ಟಿನಲ್ಲಿ ಬುದ್ಧಿಜೀವಿಗಳಾದ ದೀಕ್ಷಿತರ ಕೃತಿಗಳೆಲ್ಲವೂ ಪ್ರಮಾಣದಲ್ಲಿ ವಿಶಾಲ, ಪ್ರವಾಹದಲ್ಲಿ ಗಹನ, ರುಚಿಯಲ್ಲಿ ನಾರಿಕೇಳಪಾಕ ಮತ್ತು ಪ್ರತಿಯೊಂದೂ ಒಂದೊಂದು ಮಹಾಕಾವ್ಯ ಎಂದು ಸಂಗೀತ ಶಾಸ್ತ್ರಜ್ಞರ ಅಭಿಪ್ರಾಯ.

ದೀಪಾವಳಿ ಹಬ್ಬ ಬಂತೆಂದರೆ ದೀಕ್ಷಿತರ ದಿನಾಚರಣೆ ಬಂತೆಂದೇ ಅರ್ಥ. ಅವರು ತಮ್ಮ ಅಂತಿಮ ದಿನಗಳನ್ನು ಎಟ್ಟಿಯಾಪುರಮ್‌ನಲ್ಲಿ ಕಳೆದರು. ೧೮೩೫ನೇ ಇಸವಿಯಲ್ಲಿ ಆಶ್ವಯುಜ ಮಾಸದ ದೀಪಾವಳಿಯ ಹಿಂದಿನ ದಿನವಾದ ನರಕ ಚತುರ್ದಶಿಯಂದು ದೇವಿಯ ಸಾನ್ನಿಧ್ಯವನ್ನು ಸೇರಿದರು. ಅಂದಿನಿಂದ ದೀಪಾವಳಿ ಪಾಡ್ಯದ ಹಿಂದಿನ ದಿನವಾದ ನರಕ ಚತುರ್ದಶಿ 'ದೀಕ್ಷಿತರ ದಿನ' ಎಂದು ಸಂಗೀತ ಪ್ರಪಂಚದಲ್ಲಿ ವಿಶೇಷ ಮಹತ್ವ ಪಡೆದಿದೆ. ಅಂದು ದೀಕ್ಷಿತರು ಸ್ನಾನ ಮುಗಿಸಿ ದೇವಿಗೆ ನವಾವರಣ ಪೂಜೆ ಸಲ್ಲಿಸಿ, ಪುನ್ನಾಗವರಾಳಿ ರಾಗದ 'ಏಹಿ ಅನ್ನಪೂರ್ಣೇ' ಎಂಬ ಕೊನೆಯ ಕೃತಿಯನ್ನು ರಚಿಸಿ ಹಾಡಿದರು. ಅನಂತರ ಪೂರ್ವಿಕಲ್ಯಾಣಿ ರಾಗದಲ್ಲಿ (ದೀಕ್ಷಿತರ ಸಂಪ್ರದಾಯದ ಪ್ರಕಾರ ಗಮಕಕ್ರಿಯ) 'ಮೀನಾಕ್ಷೀ ಮೇ ಮುದಂ ದೇಹಿ' ಎಂಬ ಕೃತಿಯನ್ನು ವೀಣೆಯಲ್ಲಿ ನುಡಿಸಿ, ಶಿಷ್ಯರನ್ನೆಲ್ಲ ಕರೆದು ಸಂಗಡ ಹಾಡುವಂತೆ ಹೇಳಿದರು. ಅಂತೆಯೇ ಆ ಕೃತಿನ್ನು ಹಾಡುತ್ತ ಅನುಪಲ್ಲವಿಯ 'ಮೀನಲೋಚನಿ ಪಾಶಮೋಚನಿ' ಎಂಬ ಘಟ್ಟಕ್ಕೆ ಬಂದಾಗ ಅದನ್ನೇ ಪುನಃ ಪುನಃ ನುಡಿಸಲಾರಂಭಿಸಿ, ಶಿಷ್ಯರಿಗೂ ಆ ಸಾಹಿತ್ಯ ಭಾಗವನ್ನೇ ಮೇಲಿಂದ ಮೇಲೆ ಹಾಡುವಂತೆ ಹೇಳಿ ಕೊನೆಗೆ 'ಶಿವೇ ಪಾಹಿ, ಶಿವೇ ಪಾಹಿ, ಶಿವೇ ಪಾಹಿ' ಎಂದು ಮೂರು ಬಾರಿ ಉಚ್ಚರಿಸಿ, ಅರುವತ್ತು ವರ್ಷಗಳ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ಸಂಗೀತ ಪ್ರಪಂಚಕ್ಕೆ ಒಂದು ಮಹಾನಿಧಿಯಾದ ತಮ್ಮ ರಚನೆಗಳನ್ನು ಬಿಟ್ಟು ದೇವಿಯಲ್ಲಿ ಸಾಯುಜ್ಯ ಹೊಂದಿದರು. ❋

G. R. SHANMUGAPPA
Proprietor

BLEND PACK
Co-packers for : M/s Hindustan Unilever Ltd. &
M/s uniever India Exports Ltd. Ph: 080-2573 1424

ROHINI PACKER
Instant Coffee Packing Unit Ph: 080-2573 1148

G.R. SHANMUGAPPA TRANSPORT
Transport Contractors for : M/s Karnataka Milk Dairy &
M/s Hindustan Unilever Ltd. Ph: 080-2573 3980

Office: 19/3, 9th Mile; Hosur Road,
Electronic City post, BANGALORE - 560 100
E-mail : hll-3p.blendpack@unilever.com, rohinipacker@gmail.com